## :: COMPROMISE DECREE ::

## IN THE COURT OF THE SENIOR CIVIL JUDGE AND J.M.F.C. H.D.KOTE

## O.S. NO: 227/2025

ವಾದಿ **:** ಕರ್ನಾಟಕ ಗ್ರಾಮೀಣ್ ಬ್ಯಾಂಕ್
ಪ್ರಧಾನ ಕಚೇರಿ:ನಂ.32,ಸಂಗನಕಲ್ ರಸ್ತೆ,
ಗಾಂಧಿನಗರ ಬಳ್ಳಾರಿ-583103,ಪ್ರಾದೇಶಿಕ
ಗ್ರಾಮೀಣ ಬ್ಯಾಂಕ್ ಕಾಯಿದೆ-1976 ರಂತೆ,
ಪ್ರತಿನಿಧಿಸುವವರು ವ್ಯವಸ್ಥಾಪಕರು, ಕರ್ನಾಟಕ
ಗ್ರಾಮೀಣ್ ಬ್ಯಾಂಕ್ ಅಣ್ಣೂರು ಶಾಖೆ,
ಹೆಚ್.ಡಿ.ಕೋಟೆ ತಾಲ್ಲೋಕು, ಮೈಸೂರು ಜಿಲ್ಲೆ..

(By Smt. **Shantha**., Advocate for plaintiff)

ವಿರುದ್ಧ

ಪ್ರತಿವಾದಿ **: 1.** ತಾಯಮ್ಮ ಕೋಂ ನಂಜಯ್ಯ
ವಯಸ್ಸು ಸುಮಾರು 76 ವರ್ಷ

2. ರವಿ ಬಿನ್ ನಂಜಯ್ಯ
ವಯಸ್ಸು ಸುಮಾರು 38 ವರ್ಷ

3. ರಾಜಮ್ಮ ಬಿನ್ ನಂಜಯ್ಯ
ವಯಸ್ಸು ಸುಮಾರು 46 ವರ್ಷ

4. ಶಿವಲಿಂಗಯ್ಯ ಬಿನ್ ನಂಜಯ್ಯ
ವಯಸ್ಸು ಸುಮಾರು 54 ವರ್ಷ

5. ಪುಷ್ಪಲತಾ ಬಿನ್ ನಂಜಯ್ಯ
ವಯಸ್ಸು ಸುಮಾರು 50 ವರ್ಷ

6. ಇಂದುಮತಿ ಬಿನ್ ನಂಜಯ್ಯ
ವಯಸ್ಸು ಸುಮಾರು 48 ವರ್ಷ

7. ಶ್ರೀನಿವಾಸ ಪ್ರಸಾದ್ ಬಿನ್ ನಂಜಯ್ಯ
ವಯಸ್ಸು ಸುಮಾರು 46 ವರ್ಷ
ಭೀಮನಹಳ್ಳಿ ಗ್ರಾಮ,ಅಣ್ಣೂರು ಅಂಚೆ,
ಕಸಬಾ ಹೋಬಳಿ,ಹೆಚ್.ಡಿ.ಕೋಟೆ ತಾಲ್ಲೋಕು,
ಮೈಸೂರು ಜಿಲ್ಲೆ.

( Sri.K.S.A., Advocate for
Defendant No.1,5 to 7 and
Defendant No. 2 to 4 are absent.)

**SUIT FILED ON:28.11.2025.**

**Suit claim:** The plaintiff bank most humbly prays that this honourable court be pleased to pass a judgment and decree in favor of the plaintiff bank and against the defendant and direct the defendant to pay a sum of rs.11,30,242/- together with interest to till the date of realization together with court costs and such other reliefs as this honourable court be deems fit to grant under the circumstances of the above case in the interest of justice and equity.

The suit was taken on the $2^{8h}$ day of March, 2026 for final disposal before **Sri. Mahesh B.T., Senior Civil Judge & J.M.F.C, H.D.Kote,** in the presence of **Sri. N.S advocate for the plaintiff** and **Sri K.S.A., advocate for the defendant no.1,5 to 7 and defendant No. 2 to 4 are absent.** The following order was passed.

ದಿವಾನಿ ಪಕ್ರಿಯಾ ಸಂಹಿತೆ ಆದೇಶ **23** ನಿಯಮ **3** ರ ರೀತ್ಯಾ ಸಲ್ಲಿಸಲಾದ ಅರ್ಜಿ**.**

ವಾದಿ ಮತ್ತು ಪ್ರತಿವಾದಿಯು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ,

1. ವಾದಿಯ ಬ್ಯಾಂಕ್ ಪ್ರತಿವಾದಿಯವರ ವಿರುದ್ಧ ಸಾಲದ ವಸೂಲಾತಿ ಕೋರಿ ಈ ದಾವೆಯನ್ನು ಹೂಡಿರುತ್ತಾರೆ. ಪ್ರತಿವಾದಿಯ ವಾಯ ಬ್ಯಾಂಕ್‌ನಿಂದ ದಿನಾಂಕಃ 21.06.2017 ರಂದು 4,86,000/-ರೂಗಳನ್ನು ತಮ್ಮ ಹಳೆ ಖಾತೆ ನಂ.85047356326, ಹೊಸ ಖಾತೆ ನಂ.12099130000188 ರ ಮೂಲಕ ಸಾಲ ಪಡೆದಿರುತ್ತಾರೆ.ಸದರಿ ಸಾಲದ ಹಣಕ್ಕೆ ವಾರ್ಷಿಕ ಶೇ.13.5.% ರಂತೆ ಬಡ್ಡಿಯನ್ನು ಹಾಗೂ ಬ್ಯಾಂಕಿನಿಂದ ಕಾಲಕಾಲಕ್ಕೆ ಬದಲಾಗುವ/ನಿಗಧಿಯಾಗುವ ಬ್ಯಾಂಕಿನ ಬಡ್ಡಿಯ ದರವನ್ನು ಸೇರಿಸಿ. ಮರುಪಾವತಿ ಮಾಡುವುದಾಗಿ ಬ್ಯಾಂಕಿನ ಕರಾರು ಮತ್ತು ನಿಬಂಧನೆಗಳಿಗೆ ಒಪ್ಪಿ, ಮೇಲ್ಕಂಡ ಹಣವನ್ನು ಸಾಲವಾಗಿ ಪಡೆದಿದ್ದು, ಬ್ಯಾಂಕಿಗೆ ದಾಖಲಾತಿಗಳನ್ನು ಬರೆದುಕೊಟ್ಟಿದ್ದು, ಪ್ರತಿವಾದಿಯರು ಷೆಡ್ಯೂಲ್ ಆಸ್ತಿಯನ್ನು ವಾದಿಯ ಬ್ಯಾಂಕಿಗೆ ಅಡಮಾನ ಮಾಡಿದ್ರುಸದರಿ ಆಡಮಾನಪತ್ರವು ದಿನಾಂಕ:16-06-2017 ರಂದು ಹೆಚ್.ಡಿ.ಕೋಟೆ ಉಪ-ನೊಂದಣಾ ಕಚೇರಿಯಲ್ಲಿ ನೊಂದಾಯಿಸಲ್ಪಟ್ಟಿರುತ್ತದೆ. ವಾದಿಯು ಪ್ರತಿವಾದಿಗಳನ್ನು ಮೇಲ್ಕಂಡ ಸಾಲವನ್ನು ಮತ್ತು ಬಡ್ಡಿಯನ್ನು ಮರುಪಾವತಿಸುವಂತೆ ಕೇಳಿಕೊಂಡಾಗ,ಸಾಲ ಮರುಪಾವತಿ ಮಾಡುವುದಾಗಿ ಒಪ್ಪಿ, ಪ್ರತಿವಾದಿಯರು ದಿನಾಂಕ:06-11-2019, ದಿನಾಂಕ:25-01-2022 ಮತ್ತು 10-04-2024 ರಂದು ಲೆಟರ್ ಆಫ್ ರಿವಿವಲ್ ಪತ್ರಗಳನ್ನೂ ಪ್ರತಿವಾದಿಯು ವಾದಿಯ ಬ್ಯಾಂಕಿಗೆ ಬರೆದುಕೊಟ್ಟಿರುತ್ತಾರೆ. ಹಾಗೂ ಬ್ಯಾಂಕಿನಿಂದ ಪ್ರತಿವಾದಿಗಳಿಗೆ ಸಾಲ ಪಾವತಿಸುವಂತೆ ದಿನಾಂಕ:22-07-2025 ನೋಟೀಸ್ ನೀಡಲಾಗಿರುತ್ತದೆ ಹಾಗೂ ದಿನಾಂಕ:22-12-2023 ರಂದು ವಕೀಲರ ಮೂಲಕವೂ ಸಹ ಪ್ರತಿವಾದಿಗಳಿಗೆ ನೋಟೀಸ್ ನೀಡಲಾಗಿರುತ್ತದೆ. ಆದರೂ ಪ್ರತಿವಾದಿಗಳು ಸಾಲ ಪಾವತಿಸಿರುವುದಿಲ್ಲ. ಮೇಲ್ಕಂಡ ಸಾಲದ ಬಾಬು ದಿನಾಂಕ:30-09-2025 ಕ್ಕೆ 6,82,692/- ರೂಗಳನ್ನು ಬ್ಯಾಂಕಿಗೆ ಪ್ರತಿವಾದಿಯರು ಪಾವತಿಸಬೇಕಾಗಿರುತ್ತದೆ.

2.1 ನೇಪ್ರತಿವಾದಿಯು ವಾದಿಯ ಬ್ಯಾಂಕ್‌ನಿಂದ ದಿನಾಂಕ: 10-04-2019 ರಂದು 2,00,000/-ರೂಗಳನ್ನು ತಮ್ಮ ಹಳೆ ಖಾತೆ ನಂ.85060750450,ಹೊಸ ಖಾತೆ ನಂ.1209912000049 ರ ಮೂಲಕ ಸಾಲ ಪಡೆದಿರುತ್ತಾರೆ. ಸದರಿ ಸಾಲದ ಹಣಕ್ಕೆ ವಾರ್ಷಿಕ ಶೇ.12.5.% ರಂತೆ ಬಡ್ಡಿಯನ್ನು ಹಾಗೂ ಬ್ಯಾಂಕಿನಿಂದ ಕಾಲಕಾಲಕ್ಕೆ ಬದಲಾಗುವ/ ನಿಗಧಿಯಾಗುವ ಬ್ಯಾಂಕಿನ ಬಡ್ಡಿಯ ದರವನ್ನು ಸೇರಿಸಿ, ಮರುಪಾವತಿ ಮಾಡುವುದಾಗಿ ಬ್ಯಾಂಕಿನ ಕರಾರು ಮತ್ತು ನಿಬಂಧನೆಗಳಿಗೆ ಒಪ್ಪಿ ಮೇಲ್ಕಂಡ ಹಣವನ್ನು ಸಾಲವಾಗಿ ಪಡೆದಿದ್ದು, ಬ್ಯಾಂಕಿಗೆ ದಾಖಲಾತಿಗಳನ್ನು ಬರೆದುಕೊಟ್ಟಿದ್ದು.ಪ್ರತಿವಾದಿಯರು ಷೆಡ್ಯೂಲ್ ಆಸ್ತಿಯನ್ನು ವಾದಿಯ ಬ್ಯಾಂಕಿಗೆ ಅಡಮಾನ ಮಾಡಿದ್ದು, ಸದರಿ ಅಡಮಾನ ಪತ್ರವು ದಿನಾಂಕ: 29-03-2019 ರಂದು, ಹೆಚ್.ಡಿ.ಕೋಟೆ ಉಪ-ನೊಂದಣಾ ಕಚೇರಿಯಲ್ಲಿ ಸೊಂದಾಯಿಸಲ್ಪಟ್ಟಿರುತ್ತದೆ. ವಾದಿಯು ಪ್ರತಿವಾದಿಗಳನ್ನು ಮೇಲ್ಕಂಡ ಸಾಲವನ್ನು ಮತ್ತು ಬಡ್ಡಿಯನ್ನು ಮರುಪಾವತಿಸುವಂತೆ ಕೇಳಿಕೊಂಡಾಗ ಮರುಪಾವತಿ ಮಾಡುವುದಾಗಿ ಒಪ್ಪಿ ಪ್ರತಿವಾದಿಯರು ದಿನಾಂಕ 06.04.2022 ಮತ್ತು ದಿನಾಂಕಃ 10.04.2024 ರಂದು ಲೇಟರ್ ಆಫ್ ರಿವಿವಲ್ ಪತ್ರಗಳನ್ನೂ ಪ್ರತಿವಾದಿಯು ವಾದಿಯ ಬ್ಯಾಂಕಿಗೆ ಬರೆದುಕೊಟ್ಟಿರುತ್ತಾರೆ. ಹಾಗೂ ಬ್ಯಾಂಕಿನಿಂದ ಪ್ರತಿವಾದಿಗಳಿಗೆ ಸಾಲ ಮರುಪಾವತಿಸುವಂತೆ ದಿನಾಂಕ: 22-07-2025 ರಂದು ನೋಟೀಸ್ ನೀಡಲಾಗಿರುತ್ತದೆ ಹಾಗೂ ದಿನಾಂಕ : 22-12-2023 ರಂದು ವಕೀಲರ ಮೂಲಕವೂ ಸಹ ಪ್ರತಿವಾದಿಗೆ ನೋಟೀಸ್ ನೀಡಲಾಗಿರುತ್ತದೆ. ಆದರೂ 1 ನೇಪತಿವಾದಿಯು ಸಾಲ ಪಾವತಿಸಿರುವುದಿಲ್ಲ. ಮೇಲ್ಕಂಡ ಸಾಲದ ಬಾಬ್ತು ದಿನಾಂಕ : 30-09-2025 ಕ್ಕೆ 2,90,320/-ರೂಗಳನ್ನು 1 ನೇ ಪ್ರತಿವಾದಿಯು ಪಾವತಿಸಬೇಕಾಗಿರುತ್ತದೆ.

3. ಪ್ರತಿವಾದಿಯರು ಮೇಲ್ಕಂಡ ಸಾಲವನ್ನು ಪಡೆದುಕೊಂಡ ನಂತರ ವಾದಿಯ ಬ್ಯಾಂಕಿಗೆ ಬ್ಯಾಂಕಿನ ಷರತ್ತು ಮತ್ತು ನಿಭಂದನೆಗಳಂತೆ ಇದುವರೆವಿಗೂ ಯಾವುದೇ ಸಾಲದ ಹಣವನ್ನಾಗಲಿ,ಬಡ್ಡಿಯನ್ನಾಗಲಿ ಮರುಪಾವತಿ ಮಾಡದಿದ್ದ ಕಾರಣ ವಾದಿಯ ಬ್ಯಾಂಕಿನವರು ಹಲವಾರು ಭಾರಿ ಪ್ರತಿವಾದಿಯರನ್ನು ಖುದ್ದಾಗಿ ಬೇಟಿ ಮಾಡಿ, ಮೇಲ್ಕಂಡ ಸಾಲವನ್ನು ಮತ್ತು ಬಡ್ಡಿಯನ್ನು ಮರುಪಾವತಿಸುವಂತೆ ಕೇಳಿಕೊಂಡಿದ್ರು, ವಾದಿಯ ಬ್ಯಾಂಕ್‌ನಿಂದಲೂ ಹಾಗೂ ವಕೀಲರ ಮೂಲಕವೂ ಸಹ ಪ್ರತಿವಾದಿಗಳಿಗೆ ನೋಟೀಸ್

ನೀಡಿದ್ದು, ಸದರಿ ನೋಟೀಸ್ ಪ್ರತಿವಾದಿಗಳಿಗೆ ಜಾರಿಯಾಗಿರುತ್ತವೆ. ಆದರೂ ಸಹ ಪ್ರತಿವಾದಿಯರು ನೋಟೀಸಿಗೆ ಯಾವುದೇ ಉತ್ತರ ನೀಡಿರುವುದಿಲ್ಲ ಹಾಗೂ ಪ್ರತಿವಾದಿಯರು ಬ್ಯಾಂಕಿಗೆ ಮೋಸ ಮಾಡುವ ದುರುದ್ದೇಶದಿಂದ ಸಾಲದ ಹಣವನ್ನಾಗಲಿ, ಬಡ್ಡಿಯನ್ನಾಗಲಿ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ವಾದಿಯು ಸಾಲದ ವಸೂಲಾತಿಗಾಗಿ ಈ ದಾವೆಯನ್ನು ಘನನ್ಯಾಯಾಲಯದ ಮುಂದೆ ತಂದಿರುತ್ತಾರೆ.

4.ಮೇಲ್ಕಂಡ ಸಾಲಗಳ ಬಾಬು ಪ್ರತಿವಾದಿಯರು 11,30,242/- ರೂಗಳನ್ನು ವಾದಿಯ ಬ್ಯಾಂಕ್‌ಗೆ ಪಾವತಿಸಬೇಕಾಗಿರುತ್ತದೆ. ಮೇಲ್ಕಂಡ ದಾವೆಯಲ್ಲಿ ವಾದಿಯ ಬ್ಯಾಂಕ್ ಮತ್ತು ಪ್ರತಿವಾದಿಯರು ಸಂಧಾನಕಾರರ ಮತ್ತು ಹಿತೈಷಿಗಳ ಹಿತವಚನದ ಮೇರೆಗೆ ಜನತಾ ನ್ಯಾಯಾಲಯದಲ್ಲಿ ಒಂಬತ್ತು ಲಕ್ಷದ ಮುವತ್ತು ಸಾವಿರ (9,30,000/-)ರೂಗಳಿಗೆ ಒನ್ ಟೈಂ ಸೆಟ್ಲಮೆಂಟ್ ಮಾಡಿಕೊಂಡಿದ್ದು, ಸದರಿ ಒಂಬತ್ತು ಲಕ್ಷದ ಮುವತ್ತು ಸಾವಿರ (9,30,000/-) ರೂಗಳನ್ನು ಪ್ರತಿವಾದಿಯರು ವಾದಿಯ ಬ್ಯಾಂಕ್‌ಗೆ ಪಾವತಿಸಿರುತ್ತಾರೆ.

ಆದ್ದರಿಂದ ವಾದಿಯ ಬ್ಯಾಂಕ್ ಮತ್ತು ಪ್ರತಿವಾದಿಯರು ಘನನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಮೇಲ್ಕಂಡ ದಾವೆಯಲ್ಲಿ ವಾದಿಯ ಬ್ಯಾಂಕ್ ಪಾವತಿಸಿರುವ ಘನನ್ಯಾಯಾಲಯದ ಶುಲ್ಕವನ್ನು ವಾಪಸ್ಸು ಪಡೆಯಲು ಆದೇಶಿಸಿ, ಈ ದಾವೆಯನ್ನು ಮುಕ್ತಾಯ ಮಾಡಬಹುದೆಂದು ನ್ಯಾಯ ಮತ್ತು ಧರ್ಮದ ದೃಷಿಯಿಂದ ಪ್ರಾರ್ಥಿಸಿಕೊಳ್ಳು

And it is further ordered that, the compromise petition filed by the parties is part and parcel of the compromise decree.

And it is further ordered that, office is directed to return the Court Fee to the plaintiff.

Given under my hand and seal of this Court on the 28th day of March, 2026.

SENIOR CIVIL JUDGE & JMFC
H.D.KOTE.

## MEMORANDUM OF COST INCURRED IN THE SUIT

| | Plaintiff/s | Defendant/s |
|---|---|---|
| 1. Court fee on Plaint | 68640-00 | -- |
| 2. Service of Process | 40-00 | -- |
| 3. Advocate fee | -- | -- |
| **TOTAL** | **68680-00** | **--** |

SENIOR CIVIL JUDGE & JMFC
H.D.KOTE.

ಷೆಡ್ಯೂಲ್

ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕು, ಕಸಬಾ ಹೋಬಳಿ, ಭೀಮನಹಳ್ಳಿ ಗ್ರಾಮದ ಸರ್ವೆ ನಂ.13/6, ರಲ್ಲಿ 4-00 ಎಕರೆ ಮತ್ತು ಮೈಸೂರು ಜಿಲ್ಲೆ.ಹೆಚ್.ಡಿ.ಕೋಟೆ ತಾಲ್ಲೂಕು, ಕಸಬಾ ಹೋಬಳಿ, ಭೀಮನಹಳ್ಳಿ ಗ್ರಾಮದ ಸರ್ವೆ ನಂ.13/21 ರಲ್ಲಿ 2-00 ಎಕರೆ ಒಟ್ಟುಗೂಡಿಸಿರುವ ಸರ್ವೆ ನಂ.13 ರಲ್ಲಿರುವ ಒಟ್ಟು 6-00 ಎಕರೆ ಜಮೀನಿಗೆ ಒಂದೇ ಚಕ್ಕುಬಂಧಿ:-

ಪೂರ್ವಕ್ಕೆ : ಶಿವಣ್ಣರವರ ಜಮೀನು

ಪಶ್ಚಿಮಕ್ಕೆ : ಪುಟ್ಟಬಸಪ್ಪರವರ ಜಮೀನು

ಉತ್ತರಕ್ಕೆ : ಸಿದ್ದಯ್ಯರವರ ಜಮೀನು

ದಕ್ಷಿಣಕ್ಕೆ : ಶಿವಣ್ಣರವರ ಜಮೀನು.

SENIOR CIVIL JUDGE & JMFC
H.D.KOTE.